ಸಾಕ್ಷಿಯನ್ನು ದಿನಾಂಕಃ 21/04/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ**

ನನ್ನ ಮದುವೆ ದಿಃ 22/07/2016 ರಂದು ಆಗಿರುತ್ತದೆ. ನನಗೆ ಚಿಕ್ಕೋಡಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ಗಂಡ ಇಂಜಿನಿಯರ್ ಆಗಿದ್ದಾರೆ. ಅವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ. ಅದೆ ರೀತಿ ನೀವು ಮೊದಲಿನಿಂದಲೂ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸರಿ. ದಿಃ 31/05/2016 ರಲ್ಲಿ ನಿಮ್ಮ ಮುಖ್ಯ ವಿಚಾರಣೆಯನ್ನು ಇದೆ ನ್ಯಾಯಾಲಯದಲ್ಲಿ ನೀಡಿದ್ದೀರಿ ಎಂದರೆ ಸರಿ. ಆಗ ವಾದಿ ಪರ ವಕೀಲರು ನಿಮಗೆ ಪಾಟೀ ಸವಾಲು ಮಾಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತನ್ನು ನೀವು ಸುಂದರಮ್ ಫೈನಾನ್ಸನಿಂದ ಸಾಲ ಪಡೆದುಕೊಂಡು ಖರೀದಿಸಿದ್ದೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಲ ಪಡೆದುಕೊಂಡಿದ್ದೆ, ನನ್ನ ದುಡ್ಡು ಇದೆ ಮತ್ತು ಪೆರೆಂಟ್ಸ ಹಣವು ಇದೆ ಎಂದು ಹೇಳುತ್ತಾರೆ. ಸುಂದರಮ್ ಫೈನಾನ್ಸನಿಂದ ರೂ.6,40,000/- ಸಾಲ ಪಡೆದುಕೊಂಡಿದ್ದೆ. ಸದರಿ ಸಾಲವನ್ನು 2012 ರಲ್ಲಿ ಪಡೆದುಕೊಂಡಿದ್ದೆ. ಸಾಲ ಪಡೆದ ನಂತರ ದಾವಾ ಆಸ್ತಿಯನ್ನು ಒಟ್ಟು ರೂ.9,00,000/- ಖರೀದಿಗೆ ತೆಗೆದುಕೊಂಡಿದ್ದೇನೆ. ಸದರಿ ದಾವಾ ಸ್ವತ್ತು ಜೂನ್ 2012 ರಲ್ಲಿ ಖರೀದಿಗೆ ತೆಗೆದುಕೊಂಡಿದ್ದೇನೆ. 2012 ರಲ್ಲಿ ನೀವು ಇಂಜಿನಿಯರ್ ಪಧವಿದರಳಾಗಿದ್ದರಿಂದ ಜಾಬ್ ಮಾಡುತ್ತಿದ್ದೀರಿ ಎಂದರೆ ಸರಿ. ನೀವು ಸುಂದರಮ್ ಫೈನಾನ್ಸನಿಂದ ಸಾಲ ಪಡೆದುಕೊಂಡು ಮತ್ತು ಸ್ವಂತ ದುಡಿಮೆಯಿಂದ ದಾವಾ ಆಸ್ತಿ ಖರೀದಿಸಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆ ತಾಯಿಯೂ ಸಹ ಹಣ ಸಹಾಯ ಮಾಡಿದ್ದಾರೆ ಎಂದು ಹೇಳುತ್ತಾರೆ.

ನನ್ನ ತಂದೆ 2012 ರಲ್ಲಿ ಬಿ ಎಸ್ ಎನ್ ಎಲ್ ನಲ್ಲಿ ಕೆಲಸ ಮಾಡುತ್ತಿದ್ದರು. ನಿಮ್ಮ ತಂದೆಯಿಂದ ಎಷ್ಟು ಹಣ ಪಡೆದುಕೊಂಡಿರಿ ಎಂದು ಕೇಳಲಾಗಿ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆಯಿಂದ ಯಾವುದೇ ಹಣ ಪಡೆದುಕೊಂಡಿಲ್ಲ, ಆದ್ದರಿಂದ

ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆ ಕಡೆಯಿಂದ ಹಣ ಪಡೆದುಕೊಂಡಿದ್ದೀರಿ ಎಂದು ಹೇಳುತ್ತಿದ್ದೀರಿ ಅದರ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ದಾಖಲೆ ಇಲ್ಲ ಆದರೆ ಪಡೆದುಕೊಂಡಿದ್ದೇನೆಂದು ಹೇಳುತ್ತಾರೆ. ದಾವಾ ಸ್ವತ್ತನ್ನು ದಿಃ 04/06/2012 ರಲ್ಲಿ ಖರೀದಿಸಿದ್ದೀರಿ ಎಂದರೆ ಸರಿ. ನಾನು ಖರೀದಿ ಮಾಡುವಾಗ ಸಾಕ್ಷಿದಾರರಾಗಿ ಗೋಪಾಲ ಹೊಸಮನಿ, ನನ್ನ ತಾಯಿ ಇದ್ದರು ಎಂದು ಹೇಳುತ್ತಾರೆ. ಮತ್ತೊಬ್ಬ ಸಾಕ್ಷಿದಾರರು ಯಾರು ಎಂದು ಕೇಳಲಾಗಿ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಗೋಪಾಲ ಹೊಸಮನಿ ಇವರು ನನ್ನ ತಂದೆ ಮನೆ ಕಟ್ಟುವಾಗ ಪರಿಚಯ ಆಗಿದ್ದರು . ನನ್ನ ತಂದೆ 25-30 ವರ್ಷದ ಹಿಂದೆ ಮನೆ ಕಟ್ಟಿದ್ದಾರೆ. ಸದರಿ ಗೋಪಾಲ ಹೊಸಮನಿ ನನಗೆ 25-30 ವರ್ಷದ ಹಿಂದೆ ಪರಿಚಯ. ಸದರಿ ಗೋಪಾಲ ಹೊಸಮನಿ ಇವರು ಮುಂದೆ ನಿಂತು ನನ್ನ ತಂದೆಯ ಮನೆಯನ್ನು ಕಟ್ಟಿಸಿ ಕೊಟ್ಟಿದ್ದಾರೆ ಎಂದರೆ ಸರಿ. ಗೋಪಾಲ ಹೊಸಮನಿ ಇವರು ನಿಮಗೆ ತುಂಬಾ ಪರಿಚಯ ಎಂದರೆ ನನ್ನ ತಂದೆಯವರಿಗೆ ತುಂಬಾ ಪರಿಚಯಸ್ಥರು ಮತ್ತು ನಂಬಿಕಸ್ಥರು ಎಂದು ಹೇಳತ್ತಾರೆ. ನೀವು ಖರೀದಿಸಿದ ಪ್ಲಾಟ ದಿನಾಂಕಃ 14/12/2012 ರಂದು ವಾದಿಗೆ ಕ್ರಯ ಕರಾರು ಪತ್ರದ ಮೂಲಕ ದಿಃ 15/12/2012 ರಂದು ನೋಂದಣಿ ಮಾಡಿಸಿದ್ದೀರಿ ಎಂದರೆ ಸಾಕ್ಷಿ ನಾನು ತಾಯಿ ಹೆಸರಿಗೆ ಗಿಫ್ಟ್ ಮಾಡಲು ಹೋಗಿದ್ದೆ, ಆದರೆ ವಾದಿಯವರು ಮೋಸದಿಂದ ಕ್ರಯ ಕರಾರು ಪತ್ರ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಪ್ರದೀಪಕುಮಾರ ವಜ್ರೇಶ್ವರಿ ನಿಮಗೆ ಪರಿಚಯಸ್ಥರು ಎಂದರೆ ಇಲ್ಲ ಎಂದು ಹೇಳುತ್ತಾರೆ. ದಿಃ 15/12/2012 ರಂದು ವಾದಿಯನ್ನು ನೋಡಿದ್ದೀರಾ ಎಂದರೆ ನಾನು ನೋಡಿಲ್ಲ ಎಂದು ಹೇಳುತ್ತಾರೆ. ನಾನು ಗದಗಿನ ನೋಂದಣಿ ಕಚೇರಿಗೆ ದಿಃ 15/12/2012 ರಂದು ಬಂದಿದ್ದೆ. ದಿಃ 15/12/2012 ರಂದು ವಾದಿ ಸಬ್ ರಿಜಿಸ್ಟರ ಕಚೇರಿಗೆ ಬಂದಿದ್ದರು ಮತ್ತು ಗೋಪಾಲ ಹೊಸಮನಿ ಇವರು ಅಲ್ಲಿ ಇದ್ದರು ಎಂದರೆ ಸಾಕ್ಷಿ ವಾದಿಯನ್ನು ನೋಡಿರುವುದಿಲ್ಲ, ಮಾತನಾಡಿಸಿರುದಿಲ್ಲ ಆದರೆ ಗೋಪಾಲ ಹೊಸಮನಿ ಮಾತ್ರ ಇದ್ದರು ಎಂದು ಹೇಳುತ್ತಾರೆ. ನಿಪಿಃ 3 ನೋಂದಣಿ ಆಗುವ ಸಮಯದಲ್ಲಿ ನಾನು ಸಬ್ ರಿಜಿಸ್ಟರ ಕಚೇರಿಗೆ ಹೋಗಿದ್ದೆ. ಆ

ಸಮಯದಲ್ಲಿ ಪ್ರದೀಪ ವಜ್ರೇಶ್ವರಿಯವರು ಸಹ ಇದ್ದರು ಎಂದರೆ ಇಲ್ಲ ಎಂದು ಹೇಳುತ್ತಾರೆ. ನಿಪಿಃ 3 ಸಾಕ್ಷಿಗೆ ತೋರಿಸಿ ಸಬ್ ರಿಜಿಸ್ಟರ ಆಫೀಸನಲ್ಲಿ ನಿಮ್ಮ ಫೋಟೋ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿ ಸದರಿ ಫೋಟೋವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 3(ಇ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ವಾದಿಯ ಫೋಟೋ ಸಹ ಸಬ್ ರಿಜಿಸ್ಟರ ಆಫೀಸನಲ್ಲಿ ತೆಗೆದಿದ್ದರು ಎಂದರೆ ಸಾಕ್ಷಿ ವಾದಿಯು ಆ ಸಮಯದಲ್ಲಿ ಅವರು ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ಪ್ರಾಥಮಿಕ ಶಿಕ್ಷಣ ಇಂಗ್ಲೀಷ ಮಾಧ್ಯಮದಲ್ಲಿ ಆಗಿದೆ. 1 ರಿಂದ 10 ನೇ ತರಗತಿಯವರೆಗೆ ಒಂದು ವಿಷಯ ಕನ್ನಡ ಇರುತ್ತದೆ ಎಂದರೆ ಸರಿ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ದಿಃ 15/12/2012 ರಂದು ನೋಂದಣಿ ಕಚೇರಿಗೆ ಹೋದಾಗ ನಿಪಿಃ 3 ಓದಿದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಯಾವುದೇ ದಾಖಲೆ ನೀವು ನೋಡದೆಮತ್ತು ಓದದೆ ಸಹಿ ಮಾಡುತ್ತೀರಾ ಎಂದರೆ ಸಾಕ್ಷಿ ನನಗೆ ನಂಬಿಕಸ್ಥರು ನಾನು ಓದದೆ ಸಹಿ ಮಾಡುತ್ತೇನೆಂದು ಎಂದು ಹೇಳುತ್ತಾರೆ. ಪ್ರದೀಪ ವಜ್ರೇಶ್ವರಿಯವರು ನಿಮಗೆ ನಂಬಿಕಸ್ಥರು ಎಂದರೆ ಸಾಕ್ಷಿ ಗೋಪಾಲ ಹೊಸಮನಿ ಇವರು ನಮಗೆ ನಂಬಿಕಸ್ಥರಾಗಿರುವುದರಿಂದ ಸದರಿ ದಾಖಲೆಗೆ ಸಹಿ ಮಾಡಿದ್ದೇನೆಂದು ಹೇಳುತ್ತಾರೆ. ನಿಪಿಃ 3 ರಲ್ಲಿ ನೀವು ಪ್ರತಿಫಲ ಹಣ ತೆಗೆದುಕೊಂಡ ನಂತರ ಓದಿ ತಿಳಿದುಕೊಂಡ ನಂತರ ಸಹಿ ಮಾಡಿದ್ದೀರಿ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ನಾನು ದಾಖಲೆ ಓದಿಲ್ಲ ಎಂದು ಹೇಳುತ್ತಾರೆ. ನಿಪಿಃ 3 ಓದಿ ತಿಳಿದುಕೊಂಡು ವಾದಿ ಕಡೆಯಿಂದ ಹಣ ಪಡೆದ ನಂತರ ನಿಪಿಃ 3 ನೋಂದಾಯಿಸಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೋಂದಣಿ ಕಚೇರಿಯಲ್ಲಿ ನೋಂದಣಿ ಅಧಿಕಾರಿಗಳು ನಿಮಗೆ ಹಣ ಮುಟ್ಟಿದೆ ಎಂದು ಕೇಳಿ ತಿಳಿದುಕೊಂಡ ನಂತರ ನೀವು ಒಪ್ಪಿದ ನಂತರ ಅದಕ್ಕೆ ತಮ್ಮ ಕಚೇರಿಯ ಶೀಲು ಮತ್ತ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ನಾನು ಆವತ್ತು ಪ್ಲಾಟ ಮಾರಲು ಹೋಗಿರಲಿಲ್ಲ, ದಾನಪತ್ರ ಮಾಡಲು ಹೋಗಿದ್ದೆ ಎಂದು ಹೇಳುತ್ತಾರೆ. ನಿಪಿಃ 3 ಸಾಕ್ಷಿಗೆ ತೋರಿಸಿ ಅದರಲ್ಲಿ ದಾವಾ ಸ್ವತ್ತು ನನ್ನ ಕಬ್ಜಾ ವಹಿವಾಟು ಮತ್ತು ಮಾಲ್ಕೀಯ ಸ್ವತ್ತಾಗಿದ್ದು ನನಗೆ ಹಣದ ಅವಶ್ಯಕತೆ

ಇರುವುದರಿಂದ ವಾದಿಗೆ ಖಂಡ ಮೊಕ್ತ ರೂ.10,25,000/- ಗಳಿಗೆ ಮಾರಾಟ ಮಾಡುತ್ತಿದ್ದೇನೆ, ಈ ದಿನ ಸಂಚಕಾರ ಹಣವಾಗಿ ರೂ.10,00,000/- ನಿಮ್ಮಿಂದ ಪಡೆದಿದ್ದೇನೆಂದು ಬರೆಯಲಾಗಿದೆ ಎಂದರೆ ಸಾಕ್ಷಿ ನಾನು ಆ ದಿನ ದಾಖಲೆ ಓದಿಲ್ಲ ಎಂದು ಹೇಳುತ್ತಾರೆ. ನಿಪಿಃ 3 ಓದಿ ತಿಳಿದುಕೊಂಡು ವಾದಿಯಿಂದ ಹಣ ಪಡೆದ ನಂತರ ಸಹಿ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸ್ವತಹಃ ವಾದಿಯ ಮೇಲೆ, ಗೋಪಾಲ ಹೊಸಮನಿ ಇವರ ಮೇಲೆ ಮತ್ತು ಅಂಗಡಿ ಇವರ ಮೇಲೆ ವೈಯಕ್ತಿಕವಾಗಿ ಇದುವೆರೆಗೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೀರಾ ಎಂದರೆ ಸಾಕ್ಷಿ ನನ್ನ ತಾಯಿ ಪ್ರಕರಣ ದಾಖಲಿಸಿದ್ದರಿಂದ ನಾನು ಹಾಕಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಾಯಿ ಖರೀದಿ ವಚನ ಪತ್ರ ಬರೆದುಕೊಟ್ಟು ನಂತರ ಸುಳ್ಳು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿಃ 12 ಸಾಕ್ಷಿಗೆ ತೋರಿಸಿ ನಿಮ್ಮ ತಾಯಿಯವರು ದಿಃ 21/06/2013 ರಂದು ಮಹಾಂತೇಶ ಅಂಗಡಿಯವರೆಗೆ ಆಸ್ತಿಯನ್ನು ಒಟ್ಟು ಮಾರಾಟ ಬೆಲೆ ರೂ.8,00,000/-, ಅದರಲ್ಲಿ ರೂ.5,00,000/- ಮುಂಗಡ ಹಣ ಪಡೆದುಕೊಂಡು ನೋಂದಾಯಿತ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ಗೋಪಾಲ ಹೊಸಮನಿ ಯವರು ಮೋಸ ಮಾಡಿದ್ದಾರೆಎಂದು ಹೇಳುತ್ತಾರೆ. ನಿಪಿಃ 3 ದಿಃ 15/12/2012 ರಂದು ಆದ ಕಾಗದ ಪತ್ರ ದಿಃ 21/06/2013 ರಂದು (ನಿಪಿಃ 12) ಆಗುವವರೆಗೆ ನಿಮ್ಮ ದಾಖಲೆ ಓದಲು ಪ್ರಯತ್ನಸಿದ್ದೀರಾ ಎಂದರೆ ಸಾಕ್ಷಿ ಗೋಪಾಲ ಹೊಸಮನಿಯವರು ನೀವು ದಿಃ 15/12/2012 ರಂದು ಆದ ಕಾಗದ ಪತ್ರ ನೋಂದು ಆಗಿರುವುದಿಲ್ಲ, ನಿಮ್ಮ ತಾಯಿಯ ಸಹಿ ವತ್ತು ಫೋಟೋ ಬೇಕಾಗಿದೆ ಎಂದು ದಿಃ 21/06/2013 ರಂದು ಮೋಸದಿಂದ ನನ್ನ ತಾಯಿ ಕಡೆಯಿಂದ ದಾಖಲೆ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಾಯಿ ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿದ್ದಾರೆ. ನಿಪಿಃ 12 ಸಾಕ್ಷಿಗೆ ತೋರಿಸಿ ನಿಮ್ಮ ತಾಯಿಗೂ ಸಹ ಮುಂಗಡ ಹಣ ಮುಟ್ಟಿದೆ ಎಂದು ಸಹಿ ಮಾಡಿ ನೋಂದಣಿ ಕಚೇರಿಯಲ್ಲಿ ಫೋಟೋ ತೆಗೆಯಲಾಗಿದೆ ಎಂದರೆ ಸಾಕ್ಷಿ ಮುಂಚೆ ಕಾಗದ ಆಗಿಲ್ಲ ಎಂದು ಹೇಳಿ ನನ್ನ ತಾಯಿಗೆ ಸಹಿ ಮಾಡಿಕೊಡಿ

ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ನೀವು ಮತ್ತು ನಿಮ್ಮ ತಾಯಿ ಜನರಿಂದ ಹಣ ಪಡೆದುಕೊಂಡು ವಚನ ಪತ್ರ ಬರೆದುಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ಕಳೆದ ಬಾರಿ ನೀವು ಹಾಕಿದ ದಾಖಲೆಗಳನ್ನು ಓದಿ ತಿಳಿದುಕೊಂಡು ಬಂದಿದ್ದಾರೆ ಎಂದರೆ ತಿಳಿದುಕೊಂಡು ಬಂದಿದ್ದೇನೆಂದು ಹೇಳುತ್ತಾರೆ. ಕಳೆದ ಬಾರಿ ನೀವು ಹಾಕಿದ ಕಾಗದ ಪತ್ರದಲ್ಲಿ ಯಾರು ಯಾರ ಮೇಲೆ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ಕೇಳಲಾಗಿ ಸಾಕ್ಷಿ ಹತ್ತಿಕಾಳ ರವರು ಗೋಪಾಲ ಹೊಸಮನಿ ರವರ ಮೇಲೆ ಪ್ರಕರಣಗಳನ್ನು ದಾಖಲಿಸಿದ್ದಾರೆ. ಹತ್ತಿಕಾಳರವರಿಗೂ ಸಹ ನಮ್ಮ ಹಾಗೆ ಗೋಪಾಲ ಹೊಸಮನಿರವರು ಮೋಸ ಮಾಡಿದ್ದಾರೆ ಎಂದು ಅವರು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದಾರೆ. ಹತ್ತಿಕಾಳ ಮತ್ತು ಗೋಪಾಲ ಹೊಸಮನಿ ನಡುವೆ ಆದ ವೈಯಕ್ತಿಕ ವ್ಯವಹಾರ ಅದಕ್ಕೂ ಮತ್ತು ನಿಮ್ಮ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಗೋಪಾಲ ಹೊಸಮನಿಯವರು ನಮ್ಮ ಹಾಗೆ ಅವರಿಗೂ ಮೋಸ ಮಾಡಿ ಹಣ ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಗೋಪಾಲ ಹೊಸಮನಿಯವರ ಮೇಲೆ ಆದ ಪ್ರಕರಣಗಳು ಆಸ್ತಿಗೆ ಸಂಬಂಧಪಟ್ಟ ಪ್ರಕರಣಗಳು ಎಂದರೆ ಸಾಕ್ಷಿ ಆಸ್ತಿ ವ್ಯವಹಾರಗಳು, ಚೆಕ್ ಬೌನ್ಸ ಮತ್ತು ಇತರೆ ಎಂದು ಹೇಳುತ್ತಾರೆ. ನೀವು ಹಾಜರು ಮಾಡಿದ ಕ್ರಿವಿನಲ್ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳು ದಾವಾ ಆಸ್ತಿಗೆ ಸಂಬಂಧಪಟ್ಟದ್ದು ಅಲ್ಲ ಎಂದರೆ ಸಾಕ್ಷಿ ನಮ್ಮ ಹಾಗೆ ಬೇರೆಯವರಿಗೆ ಮೋಸ ಮಾಡಿದ್ದಾರೆ ಎಂದು ತೋರಿಸಲು ಹಾಜರು ಪಡಿಸಿದ್ದೇನೆಂದು ಹೇಳುತ್ತಾರೆ.

ಇದೆ ನ್ಯಾಯಾಲಯದಲ್ಲಿ ಮಹಾಂತೇಶ ಅಂಗಡಿ ಯವರು ನಿಮ್ಮ ತಾಯಿ ಮೇಲೆ specific performance of contract ಅಡಿಯಲ್ಲಿ OS no.32/2015 ಹಾಕಿದ್ದರು ಅದು ನಿಡಿಃ 13 ಎಂದು ಗುರುತಿಸಲಾಗಿದೆ ಎಂದರೆ ಸರಿ. ಸದರಿ ನಿಡಿಃ 13 ರ ಪ್ರಕಾರ ನಿಮ್ಮ ತಾಯಿ ಮಹಾಂತೇಶ ಅಂಗಡಿಯವರ ಜೊತೆ ನ್ಯಾಯಾಲಯದ ಮುಂದೆ ರಾಜಿ ಆಗಿ ದಿಃ 25/07/2017 ರಂದು ಮಹಾಂತೇಶ ರವರ ಕಡೆಯಿಂದ ಪಡೆದ ರೂ.5,00,000/- ಹಣವನ್ನು ಡಿ ಡಿ ಮೂಲಕ ಅವರಿಗೆ ಹಿಂದುರುಗಿಸಿ ಸದರಿ ಪ್ರಕರಣವನ್ನು ನ್ಯಾಯಾಲಯದ ಮುಂದೆ ರಾಜಿ ಮಾಡಿಕೊಂಡಿದ್ದಾರೆ ಎಂದರೆ ಸರಿ.

ಗೋಪಾಲ ಹೊಸಮನಿ ಮೋಸ ಮಾಡಿದ್ದಾರೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ಹೊರತುಪಡಿಸಿ ನಿಡಿಃ 15 ರಿಂದ ನಿಡಿಃ 32 ರವರೆಗೆ ದಾಖಲಾತಿಗಳು ಈ ಪ್ರಕರಣಕ್ಕೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ ನೀವು ಮತ್ತು ಗೋಪಾಲ ಹೊಸಮನಿಯವರು ಚೆನ್ನಾಗಿ ಸಂಬಂಧ ಹೊಂದಿದ್ದೀರಿ ಎಂದರೆ ಸರಿಯಲ್ಲ. ವಾದಿ ನನಗೆ ದಿಃ25/11/2014 ರಂದು ನೋಟಿಸು ಬಂದಿರುತ್ತದೆ. ದಿಃ 25/11/2014 ರಂದು ವಾದಿಗೆ ವಚನ ಪತ್ರ ಆಗಿದೆ ಮತ್ತು ನನ್ನ ತಾಯಿಗೆ ದಾನಪತ್ರ ಆಗಿಲ್ಲ ಎಂದು ಗೊತ್ತಾಯಿತು. 2014 ರಿಂದ ಇಲ್ಲಿಯವರೆಗೆ ವಾದಿಯ ಮೇಲೆ ಯಾವುದೇ ಕಾನೂನು ಕ್ರಮ ಜರುಗಿಸಿಲ್ಲ ಎಂದರೆ ಸಾಕ್ಷಿ ಪೊಲೀಸರಿಗೆ ದೂರು ಕೊಡಲು ಹೋಗಿದ್ದೆ ಆದರೆ ಅವರು ಸಿವಿಲ್ ಪ್ರಕರಣ ಎಂದು ದಾಖಲಿಸಿಲ್ಲ ಎಂದು ಹೇಳುತ್ತಾರೆ. ಯಾವಾಗ ಹೋಗಿದ್ದೀರಿ ಎಂದು ಕೇಳಲಾಗಿ ಸಾಕ್ಷಿ ನೋಟಿಸು ಬಂದ ನಂತರ ಹೋಗಿದ್ದೆ ಎಂದು ಹೇಳುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಸ್ವತಹಃ ಮುಂದುವರೆದು ನನ್ನ ತಾಯಿ ಖಾಸಗಿ ಫಿಯಾರ್ಧಿ ನ್ಯಾಯಾಲಯದಲ್ಲಿ ಹಾಕಿದ್ದಾರೆ ಎಂದು ಹೇಳುತ್ತಾರೆ. ನಾನು ಸ್ವತಹಃ ಖಾಸಗಿ ಫಿಯಾರ್ಧಿ ಸಲ್ಲಿಸಿಲ್ಲ. ಆದರೆ ನಾನು ಅದರಲ್ಲಿ ಸಾಕ್ಷಿದಾರಳಾಗಿದ್ದೇನೆಂದು ಹೇಳುತ್ತಾರೆ. ತಾಯಿ ಜೊತೆ ಖಾಸಗಿ ಫಿಯಾರ್ಧಿ ಸಲ್ಲಿಸಲು ನಾನು ನ್ಯಾಯಾಲಯಕ್ಕೆ ಬಂದಿದ್ದೆ. ನಿಮ್ಮ ತಾಯಿಯ ಜಮೀನಿನ ಬಗ್ಗೆ ಫಿಯಾರ್ಧಿ ಇದೆ, ನನ್ನದು ಪ್ಲಾಟಿನ ಬಗ್ಗೆ ಇದೆ ಎಂದು ವಕೀಲರಿಗೆ ಖಾಸಗಿ ಫಿಯಾರ್ಧಿ ಸಲ್ಲಿಸಲು ಹೇಳಿದ್ದೀರಾ ಎಂದರೆ ಸಾಕ್ಷಿ ಎಲ್ಲಾ ಒಂದಕ್ಕೊಂದು ಸಂಬಂಧ ಇದಿದ್ದರಿಂದ ಒಂದೆ ಖಾಸಗಿ ಫಿಯಾರ್ಧಿ ಹಾಕಿದ್ದೇವೆ ಎಂದು ಹೇಳುತ್ತಾರೆ. ನನ್ನ ತಾಯಿ ಬರೆದುಕೊಟ್ಟ ವಚನ ಪತ್ರದ ಆಸ್ತಿ ಕಣಗಿನಹಾಳ ಗ್ರಾಮದಲ್ಲಿ ಇದೆ. ದಾವಾ ಆಸ್ತಿ ಗದಗ- ಬೆಟಗೇರಿಯ ಸಾಯಿಬಾಬಾ ಟೆಂಪಲ್ ಹತ್ತಿರ ಇದೆ.

**ಮುಂದಿನ ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು ಆಲಿಸಿ ಪ್ರಕರಣವನ್ನು ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
21.04.2026
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**